ಶ್ರೀ ಪ.ವಿ.ವ.ಸಂ.ಸಾ

# ಜಿ.ಪಿ.ಪೋರವಾಲ ಕಲಾ,ವಾಣಿಜ್ಯ ಹಾಗೂ ವಿ.ವಿ.ಸಾಲಿಮಠ ಮಹಾವಿದ್ಯಾಲಯ

ಸಿಂದಗಿ – 586128

**2022 – 2023**

ತಾ : ಸಿಂದಗಿ ಜಿ : ವಿಜಯಪುರ

# ಕನ್ನಡ ವಿಭಾಗ

## ಯೋಜನಾಕಾರ್ಯ

## ಜಾನಪದ ನೃತ್ಯಗಳು

ಇವರಿಂದ,

ಪವಿತ್ರಾ ಅಂಗಡಿ

ಬಿ.ಎಸ್.ಸಿ 2ನೇ ಸೆಮಿಸ್ಟರ್

ರಿ.ನಂ : U15NB22S0031

ತಾ. ಸಿಂದಗಿ ಜಿ. ವಿಜಯಪುರ

ಮಾರ್ಗದರ್ಶಕರು :

ಪ್ರತಿಕ್ಷಾ.ಎಂ. ತಳವಾರ(ಎಂ.ಎ ಎಂ.ಎಡ್)

ಕನ್ನಡ ಸಹಾಯಕ ಪ್ರಾಧ್ಯಾಪಕರು

Head
Dept. of Kannada
G.P.P. Arts, Commerce & V.V.S. Science
College, SINDAGI-586128.

Co-ordinator IQAC
G. P. Porwal Arts, Comm & V. V. Salimath
Science College, SINDGI-586128. Dt.Vijayapur

Principal,
G. P. Porwal Arts, Comm &
V. V. Salimath Sc. College
SINDGI-586128. College Code: 523

S.P.V.V.S.S

# G.P.PORWAL ARTS,COMMERCE AND SCIENCE COLLEGE

SINDAGI-586128

2022-23

T:SINDAGI D:VIJAYAPURA

# KANNADA DEPARTMENT

## PROJECT WORK

## JANAPADA NRUTYAGALU

ASSISTANT PROFESSOR

PRATIKA.M. TALAWAR(M.A M.Ed)

KANNADA PROFFESSIOR

SUBMITTED BY :

PAVITRA ANGADI

B.Sc II^nd Sem

Reg no : U15NB22S0031

TQ :SINDAGI D:VIJAYAPURA

S.P.V.V.S.

S

# G.P.PORWAL ARTS, COMMERCE AND V.V.SALIMAI'H SCIENCE COLLEGE SINDAGI - 586 128

## DEPARI'MENI' OF KANNADA

## CERTIFICATE

Register No: U15NB22S0031

Class: B.Sc II$^{nd}$ Sem

This is to certify that, Kumari PAVITRA ANGADI satisfactorily completed Project work on JAANAPADA NRUTYAGALU under my supervision in G.P.Porwal Arts,Commerce and V.V.Salimath Science College Sindagi in the Academic year 2022-2023.

HOD

Dr. S. I. Bhandari

Department of Kannada

G.P.P & V.V.S College Sindagi

Pratika.M.Talawar

(Kannada Assistant professor)

Department of Kannada

G.P.P & V.V.S College Sindagi

Co-ordinator IQAC

G. P. Porwal Arts, Comm & V. V. Salimath Science College, SINDGI-586128. Dt.Vijayapur

Principal,

G. P. Porwal Arts, Comm & V. V. Salimath Sc. College SINDGI-586128. College Code: 5234

## —: ಜಾನಪದ ನೃತ್ಯ :—

**ಪ್ರಾಸ್ತಾವಿಕ :—**

ಭಾರತ ದೇಶದಲ್ಲಿ ನಮ್ಮ ಕರ್ನಾಟಕದ ಜಾನಪದ ಸಂಸ್ಕೃತಿ ಅತ್ಯಂತ ಶ್ರೀಮಂತವಾಗಿದೆ. ಕಲೆ, ಸಾಹಿತ್ಯ, ನೃತ್ಯ (ಡೊಳ್ಳು ಕುಣಿತ, ಲಂಬಾಣಿ, ಕರಡಿ ಮಜಲು, ವೀರಗಾಸೆ, ನಂದಿಕೋಲು ಕುಣಿತ ಇತ್ಯಾದಿ), ನಾಟಕ (ಬಯಲಾಟ, ಸಣ್ಣಾಟ, ಶ್ರೀ ಕೃಷ್ಣಪಾರಿಜಾತ, ರಕ್ತರಾತ್ರಿ) ಮುಂತಾದ ವಿವಿಧ ಪ್ರಕಾರಗಳನ್ನು ನಮ್ಮ ಕನ್ನಡ ಸಂಸ್ಕೃತಿಯ ಒಂದು ಭಾಗವಾದ ಜಾನಪದ ಗೀತೆಗಳು ಅತ್ಯಂತ ವೈವಿಧ್ಯಮಯವಾಗಿ ಕನ್ನಡ ನಾಡಿನ ವಿವಿಧ ಪ್ರದೇಶಗಳ ಪ್ರಾದೇಶಿಕ ಸೊಗಡುಗಳನ್ನು ನಮ್ಮ ಮುಂದಿನ ಪೀಳಿಗೆಗೆ ತೋರುವ ಸಾಧನವೆ ಎಂದರೆ ತಪ್ಪಿಲ್ಲ. ಜಾನಪದ ಗೀತೆಗಳಾದ ಲಂಬಾಣಿ ಪದ, ಗೀಗೀ ಪದ, ಕೋಲಾಟದ ಪದ, ರಾಗಿ ಬೀಸುವ ಪದ, ಸೋಬಾನೆ ಹಾಡುಗಳು, ಲಾವಣಿ ಇನ್ನು ಅನೇಕ ವಿವಿಧ ಬಗೆಯ ಜಾನಪದ ಗೀತೆಗಳು ಆಯಾ ಪ್ರದೇಶದ ಜನರ ದೈನಂದಿನ ಚಟುವಟಿಕೆಗಳನ್ನು, ಕೌಟುಂಬಿಕ ಜೀವನವನ್ನು, ಸಂಬಂಧಗಳನ್ನು, ದೇವರುಗಳನ್ನು ಹಾಗೂ ಧಾರ್ಮಿಕ ಆಚರಣೆಗಳನ್ನು ನಮ್ಮ ಮುಂದೆ ತೆರೆದಿಡುತ್ತವೆ. ಇದು ಹಳ್ಳಿಯ ಸಾಮಾನ್ಯ ಜನರ ನಡುವೆ ಹುಟ್ಟಿ ಬಾಯಿಂದ ಬಾಯಿಗೆ ಹರಿದು ಬಂದಿರುವ ಸಂಗೀತ ಪ್ರಕಾರವಾಗಿದೆ.

Co-ordinator IQAC
G. P. Porwal Arts, Comm & V. V. Salimath Science College, SINDGI-586128. Dt:Vijayapur

Principal,
G. P. Porwal Arts, Comm & V. V. Salimath Sc. College
SINDGI-586128. College Code:

Head
Dept. of Kannada
G.P.P. Arts, Commerce & V.V.S. Science

ಗ್ರಾಮೀಣತೆಯಿಂದ ಜಾನಪದ ಸಾಹಿತ್ಯವನ್ನು ಓದಲು ಓದಲಾಗ ಬರೆದರೂ ಕೊಟ್ಟಿಲ್ಲ, ಇವು ನೂರಾರು ವರ್ಷಗಳಿಂದ ಸಾವಿರಾರು ಜನಗಳ ಬಾಯಿಂದ ಹರಿದು ಬಂದ ನುಡಿಗಳು, ನಮ್ಮ ಹಳ್ಳಿಗಳಲ್ಲಿ ಕಲಾಮಾನಸಿಕತೆಯನ್ನು, ಸೃಜನಶೀಲತೆಯನ್ನು ಮತ್ತು ಮಾಧುರ್ಯ-ವನ್ನು ಹಳ್ಳಿಗರಿಗೆ ತಿಳಿಯುವಂತೆ ಅವರ ಜೀವನ ವಿಧಾನವನ್ನಾಗಿ ಪರಿಪಾಲಿಸಿದ ಸಂಸ್ಕೃತಿಯಿಂದರ ಕಟ್ಟಿಕೊಟ್ಟಿದ್ದಾರೆ (ಪ್ರಾಯಶಃ ಸಹಸ್ರಾರು ವರ್ಷದ ಹಿಂದೆ ಜಗತ್ತಿನಲ್ಲಿ ಇದ್ದದ್ದು ಜಾನಪದವೊಂದೇ, ಮಾನವನು ತಾನು ಮಾಡುವ ಕೆಲಸಗಳಲ್ಲಿ ತನ್ನಂತಿಕೆಯನ್ನು ತುಂಬಿ ಮಾಡಿದ ಪ್ರತಿಯೊಂದರ ಪರಿಣಾಮವೇ ಜಾನಪದವಾಗಿರಬಹುದು. ಇದು ಓದಿನಾಚೆ ಆಧಾರದ, ಸಂಪ್ರದಾಯದ ಮೌಖಿಕವಾಗಿಯಲ್ಲದೇ ತಲೆಯಿಂದ ತಲೆಗೆ ಹರಿದು ಬಂದ ಮನುಷ್ಯನ ಸಂಸ್ಕೃತಿಯ ಸಾರವಾಗಿ 'ಜಾನಪದ'.

## ಜಾನಪದದ ಅರ್ಥ :-

'ಜಾನಪದ' ಎನ್ನುವ ಪದ ಇಂಗ್ಲೀಷಿನಲ್ಲಿ Folklore ಎಂಬುದಕ್ಕೆ ಸಮಾನಾರ್ಥಕವಾಗಿ ಬಳಸಿರುವ ಕನ್ನಡ ಪದ. Folklore ಎನ್ನುವುದು Folk & lore ಎಂಬ ಎರಡು ಪ್ರತ್ಯೇಕ ಅರ್ಥವನ್ನು ಉಳ್ಳ ಪದಗಳ ಸಂಯೋಗದಿಂದ ಆಗಿದೆ. Folk ಎನ್ನುವುದಕ್ಕೆ ಕನ್ನಡದಲ್ಲಿ ಜನಪದ ಎಂದೂ, Lore ಜ್ಞಾನ ಎಂದೂ

ಇದೆ. ಜನರಲ್ಲಿರುವ ಸಿದ್ಧಿಗಳ ಬಗ್ಗೆ ಇರುವ ಜ್ಞಾನವೇ ಜನಪದ ಎಂದು ತಿಳಿಯಬಹುದು. ಜನಪದರ ಸಾಹಿತ್ಯ, ಸಂಗೀತ, ನೃತ್ಯ, ಕಲೆ ಈ ಎಲ್ಲವನ್ನು ಒಳಗೊಂಡಿದ್ದು ಜಾನಪದವೆಂದು ಹೇಳಬಹುದು. ಮನುಷ್ಯನ ಬದುಕಿನೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿ ತಲೆ-ತಲೆಮಾರುಗಳಿಂದ ಬಂದಿರುವ ವಿಶಿಷ್ಟ ಪರಂಪರೆಯಲ್ಲಿ ಸಂಬಂಧ ಜ್ಞಾನವೇ ಜನಪದ.

ಜಾನಪದದ ವ್ಯಾಖ್ಯೆ — ಅಲ್ಲದೆ ಭಾರತೀಯ ಪಾಶ್ಚಾತ್ಯ ಹಾಗೂ ವಿದೇಶಿ ವಿದ್ವಾಂಸರು ವ್ಯಾಖ್ಯಾನವನ್ನು ನೀಡಲು ಪ್ರಯತ್ನಿಸಿದ್ದಾರೆ.

1) ಬ್ರೂನ್‌ವಾಂಡ್: "ಜನಾಂಗಗಳ ಸಿದ್ಧಾಂತಗಳನ್ನು ಸಮಗ್ರವಾಗಿ ಅಧ್ಯಯನ ಮಾಡುವ ವಿಜ್ಞಾನ, ಜನ ಜೀವನದಲ್ಲಿ ಇಂದಿಗೂ ಕೂಡ ಬರುವುದು. ಅದರ ಈ ಕಾಲದಲ್ಲಿ ಕಥೆಗಳನ್ನು ನಂಬಿಕೆಗಳನ್ನು ವಿಚಾರಗಳನ್ನು ಕುರಿತು ವಿಜ್ಞಾನ ಅಧ್ಯಯನ ಮಾಡುತ್ತದೆ. ಸಮಾಜದ ಮಾಂತ್ರಿಕವರ್ಗದ ಮಾತ್ರವೇ ಜಾನಪದ".

2) ಎಡ್ವಿನ್ ಸಿಡ್ನಿ ಹಾರ್ಟ್‌ಲ್ಯಾಂಡ್:—

"ಜಾನಪದ ಎನ್ನುವುದು ಸಂಪ್ರದಾಯದ ವಿಜ್ಞಾನ, ಅಂದರೆ ಪರಂಪರಾಗತ ಜ್ಞಾನವು ನವೀನ ಕಾಲದಲ್ಲಿ ಪ್ರಯೋಗವಾದ-ಲ್ಲ ಸಾಗಿಬರುವ ಪ್ರಕ್ರಿಯೆಯನ್ನು ಹಾರ್ಟ್‌ಲ್ಯಾಂಡ್ ಸಂಪ್ರದಾಯ ಎಂದು ಕರೆಯುತ್ತಾರೆ".

3) ಐ ಡಬ್ಲ್ಯು ಮ್ಯಾಕಲಿಸ್:-

ಮೌಖಿಕ ಸಂಪ್ರದಾಯದಲ್ಲಿ ಬಾಯಿಂದ ಬಾಯಿಗೆ ಪರಂಪರಾಗತ ವಿಷಯವಾಗಿರುವ ಪದ್ಯ ಮತ್ತು ಗದ್ಯ ವಿಷಯವಾ-ಗಿರುವ ಅದುವೇ ಜಾನಪದ ಎನ್ನುತ್ತೇವೆ. ಇಂತ ಜಾನಪದದ ಮೂಲಗಳು ಮೌಖಿಕ ಪ್ರಸರಣ loyal transmission ಎಂದು ಸ್ಪಷ್ಟಪಡಿಸಿದ್ದಾರೆ.

4) ಬಾಚರ್ ಮೋಲಿಂಡರ್:-

ಬಾಯಿಮಾತ ಹಿಂದಿನಿಂದ ಜ್ಞಾನ ಅನುಭವ ಜಾಣ್ಮೆ ಕೌಶಲ್ಯ ಹವ್ಯಾಸಗಳು ಮತ್ತು ಅನುಸರಣೆಗಳು ಹಲವು ತಲೆಮಾರಿನಿಂದ ಹರಿದ ಬಳಿ ಮಾತಿನ ಮೂಲಕ ರೂಪಾಂತರಗೊ-ಳ್ಳುತ್ತಲೇ ಇರುವ ಪುಸ್ತಕ ಅಚ್ಚು ವಿಷಯಗಳು ಲಭ್ಯವಿಲ್ಲ-ದೇ ಇಲ್ಲಿ ನಾವು ಜಾನಪದ ಕಾಣುತ್ತೇವೆ.

ಕೆಲವು ಭಾರತೀಯ ವಿದ್ವಾಂಸರುಗಳು ಕೂಡ ಜಾನಪದದ ಬಗ್ಗೆ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಅವುಗಳಲ್ಲಿ ಕೆಲವು:-

) ಡಾ. ಜೀ. ಶಾಂತಿ:-

ಜಾನಪದ ಅಖಿಲ ರಾಜ್ಯಗಳಿಂತ ಜನತೆಯ ಗ್ರಂಥಸ್ಥವ-ಲ್ಲದ ಸಾಂಪ್ರದಾಯಿಕ ಮೊತ್ತ. ಸಂಪ್ರದಾಯವನ್ನು ಕುರಿತಾದ ವಿಜ್ಞಾನ ಬಾಯಿಂದೇ ಸಮಾಜದ ಮೌಖಿಕ ಪರಂಪರೆಗಳು ಕಲೆ ಮತ್ತು ನಂಬಿಕೆ-ಗಳ ಮೊತ್ತ.

2) ಜಿ. ಶಂ. ಪರಮಶಿವಯ್ಯ :-

ನಾಗರಿಕತೆಗೆ ಮೂಲವಾದ ಶಿಷ್ಟ ಸಂಸ್ಕೃತಿಯಿಂದ ದೂರವಾದ ಪರಂಪರಾನುಗತವಾದ ಬಳುವಳಿಗಳನ್ನು ಪಡೆದ ಜನಸಮುದಾಯದ ವಿಶಿಷ್ಟ ಸಂಸ್ಕೃತಿಯೇ ಜಾನಪದ.

3) ದೇ. ಜವರೇಗೌಡ :-

ಬಾಲ ಬಾಯಿಯಿಂದಲ್ಲ (ಬಾಯ್ದಿರೆ) ಹರಿದು ಬಂದಂತೆ ಜಾನಪದದಲ್ಲಿ (ಅಲ್ಲಲ್ಲಿ) ಹರಿದಿದೆ.

4) ಕಾ. ರಾ. ಕೃಷ್ಣಸ್ವಾಮಿ :-

ಜನತೆಯ ನಾಲಗೆಯ ತುಗಿ ತೊಟ್ಟಿಲನ ಮೇಲೆ ನಲಿದಾಡುತ್ತಾ ಜನಸಾಮಾನ್ಯರ ಸಂಸ್ಕೃತಿಯಾಗಿ ಅಭಿವ್ಯಕ್ತಿಯಾಗಿದೆ.

* ಜಾನಪದ ಲಕ್ಷಣಗಳು :-

ಪರಂಪರಾಗತ ಅನುಭವ ಜ್ಞಾನವನ್ನು ಹೊಂದಿರುವ ವಿಶಿಷ್ಟ ಪರಂಪರೆಯ ಜಾನಪದ ಪ್ರಮುಖ ಲಕ್ಷಣಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

1. ಮೌಖಿಕ ಸಂಪ್ರದಾಯ
2. ಸಾಮೂಹಿಕ ಸೃಷ್ಟಿ
3. ವ್ಯಾಪಕತೆ
4. ಸಹಜವಾದದ್ದು
5. ಪರಂಪರೆಯಿಂದ ಬಂದದ್ದು
6. ಸರಳತೆ, ಸ್ಪಷ್ಟತೆ

7. ಸಂವಹನಾ ಶೀಲತೆ

8. ಇಷ್ಟು ವ್ಯಾಪಕತೆ

9. ಜಾನಪದ ಸಂಸ್ಕೃತಿಯ ಒಂದು ಭಾಗ

10. ಎಲ್ಲರ ಸಾಮಾನ್ಯ ಒಪ್ಪಿಗೆಯಾಗಿದೆ.

11. ಜನಪ್ರಿಯ ಪರಂಪರೆಗೆ ಸೇರಿದೆ.

12. ಜಾನಪದ ಸರ್ವ ಸಾಮಾನ್ಯ ಒತ್ತೆ.

1) ತಾಂತ್ರಿಕ ಸಂಪ್ರದಾಯ :-

ಜನಪದವು ಅನೇಕ ಲಕ್ಷಣಗಳಲ್ಲಿ ತಾಂತ್ರಿಕ ಸಂಪ್ರದಾಯವು ಒಂದು ಪ್ರಮುಖವಾದದ್ದು. ಜಾನಪದವು ಗ್ರಂಥಸ್ಥ ರೂಪವನ್ನು ಪಡೆಯಬೇಕಿದೆ. ತಲೆತಲಾಂತರದಿಂದ ಕಿವಿಯಿಂದ ಕಿವಿಗೆ ಬಾಯಿಯಿಂದ ಬಾಯಿಗೆ ಹರಿದು ಬಂದಿದೆ. ಮೌಖಿಕವಾಗಿ ಜಾನಪದವು ಅಸ್ತಿತ್ವದಲ್ಲಿ ಸಹಜವಾಗಿದೆ. ಇದಾಗಿ ತಾಂತ್ರಿಕ ಸಂಪ್ರದಾಯದ, ಪುರಾಣ, ಹಾಡು, ಐತಿಹ್ಯ, ಕಥೆ, ಗಾದೆ, ಒಗಟು, ನಂಬಿಕೆ, ಆಚರಣೆ, ಕಲೆ, ವೈದ್ಯ, ಆಟ, ಮಂತ್ರ ಇವೇ ಎಲ್ಲವೂ ನೆನಪಿಡುವುದರ ಮೂಲಕ ಹೇಳಿ ಅನುಕರಿಸುವುದರ ಮೂಲಕ ಇಂದಿನ ತಲೆಮಾರಿನಿಂದ ಇಂದು ತಲೆಮಾರಿಗೆ ಸಾಗಿ ಬರುತ್ತಿದೆ.

2) ಸಾಮಾಜಿಕ ಹೊಸ ಸೃಷ್ಟಿ :

ತಲೆಮಾರಿನಿಂದ ತಲೆಮಾರಿಗೆ ಅದು ಸಮುದಾಯದ ಸೃಷ್ಟಿಯಾಗಿ ಬರುವಾಗ ಅದರ ಮೂಲ ಕರ್ತೃ ಕಣ್ಮರೆಯಾಗಿ ಅದು ಸಮುದಾಯದ ಸ್ವತ್ತಾಗಿ ಉಳಿಯುತ್ತದೆ. ಅಂದರೆ ನಿರಂತರವಾಗಿ ಸಾಮಾಜಿಕ ಹೊಸ ಸೃಷ್ಟಿಗೆ ಒಳಗಾಗುತ್ತಲೇ ಇರುತ್ತದೆ. ಇದರಿಂದಾಗಿ ಜನಪದ ಸಾಹಿತ್ಯದಲ್ಲಿ ವ್ಯಕ್ತಿ ಪ್ರತಿಷ್ಠೆಗೆ ಯಾವುದೇ ಅವಕಾಶವಿಲ್ಲ.

3) ## ವ್ಯಾಪಕತೆ :-

ಜಗತ್ತಿನ ಸಮಸ್ತ ಸಂಗತಿಗಳನ್ನು ಜ್ಞಾನವು ಒಳಗೊಂಡಿರುತ್ತದೆ. ಆಧ್ಯಾತ್ಮಿಕ ಸಂಸ್ಕೃತಿಯವರೆಗೂ — ಅಭಿವೃದ್ಧಿ ಇಲ್ಲದೆ. ಜ್ಞಾನದಲ್ಲಿ ಜಗತ್ತಿನ ಸಾಧಾರಣ ಸಂಗತಿಗಳು ಜ್ಞಾನದಲ್ಲಿ ಹಾಸು ಹೊಕ್ಕಾಗಿ ಸೇರಿರುತ್ತವೆ. ಪ್ರಾಂತೀಯ ಜ್ಞಾನದಲ್ಲಿ ವ್ಯಾಪಕತೆ ಮಾತ್ರ ಸೀಮಿತವಾಗಿದ್ದು ಮಾತ್ರವಲ್ಲ. ದೇಶದಲ್ಲಿ ಭಕ್ತಿ ಪ್ರೇಮ ಮಾನವೀಯ ತಿಳಿದ ಹೆಚ್ಚು ಸಂಬಂಧ ಜೀವನ ಶಾಂತಿ ವೈಜ್ಞಾನಿಕ ಚಿಂತನ ಜೀವನ ಕಲೆ ಸಂಸ್ಕೃತಿ ಇತ್ಯಾದಿ ವಿಷಯಗಳನ್ನೊಳಗೊಂಡ ಆಗರ-ವೇ ಜ್ಞಾನವಾಗಿದೆ.

4) ## ಸಜೀವವಾದದ್ದು :-

ಜ್ಞಾನವು ಮೂಲತಃ ಪರಂಪರಾಗತ ಬಂದ ಜ್ಞಾನ. ಇದು ಸಮಷ್ಟಿ ಕೃತಿಯಾಗಿದೆ. ಪ್ರಪಂಚದ ಎಲ್ಲಾ ಕಾಲದಲ್ಲಿ ಸಾಮಾನ್ಯವಾಗಿ — ಅಸ್ತಿತ್ವ-ದಲ್ಲಿರುತ್ತದೆಯಾದರೂ — ಎಲ್ಲಾ ಕಾಲದಲ್ಲಿ ಜ್ಞಾನವು ಹೊಸ ರೂಪ ಪಡೆಯುತ್ತದೆ. ಮನುಷ್ಯ ನಾಗರಿಕತೆಯಿಂದ ಮುಂದುವರೆದರೂ ಸಹ ಅವನ ಜೊತೆ ಜ್ಞಾನವು ಪ್ರಭಾವ ಬೀರುತ್ತದೆ. ಇದು ಜೀವಂತ ಪ್ರವಹಿಸುತ್ತಿರುವುದು, ಹೊರತು ನಶಿಸುವುದಿಲ್ಲ. ಆಧುನಿಕ ಕಾಲದಲ್ಲಿ ಗರಿಗೆದರಿ ನಲಿನಲಿಸುತ್ತ ಜ್ಞಾನವು ಒಂದಲ್ಲ ಒಂದು ರೀತಿಯಲ್ಲಿ ಬದುಕುತ್ತಿದೆ.

5) ## ಪರಂಪರೆಯಿಂದ ಬಂದದ್ದು :—

ಜ್ಞಾನವು ಜ್ಞಾನ ಪರಂಪರಾಗತವಾಗಿ ಸಾಗಿ ಬಂದದ್ದು. ಜ್ಞಾನವು ಹಿರಿಯರ ಪೀಳಿಗೆಯಲ್ಲಿ ಮೌಖಿಕ ಸಂಪ್ರದಾಯವನ್ನು — ಅನುಸರಿಸಿ ತಲೆಮಾರಿನಿಂದ ತಲೆಮಾರಿಗೆ ಸಾಗಿ ಬಂದ ಜ್ಞಾನ ಪರಂಪರೆ ಮಾತ್ರ. ಹಾಡು ಬರೆಯದ ಬದುಕಿನ ಚಿತ್ರಣಗಳನ್ನು ಹಿರಿಯರು ಮೌಖಿಕವಾಗಿ ಹೇಳುವುದು, ನೆನಪಿನಲ್ಲಿಟ್ಟುಕೊಳ್ಳುವುದು, ಸಾಧಿಸುವುದು ಮತ್ತು — ಅನುಸರಿ-ಸುವುದು — ಈ ಸಂಸ್ಕಾರ ಪರಂಪರೆಯಿಂದ ಬಂದಿದೆ.

6) ಸಂಸ್ಕೃತಿ, ಸೃಷ್ಟಿತೆ :-

ಮಾನವನು ಸಾಮಾನ್ಯವಾಗಿ ಅನುಕರಣ ಪ್ರಾಣಿಯಾಗಿದೆ. ಇದು ಪ್ರಪಂಚದಾದ್ಯಂತ ಇರುವಂತಹದ್ದು. ಆದ್ದರಿಂದ ಮಾನವನು ಸಂಸ್ಕೃತಿ ಹಾಗೂ ಸೃಷ್ಟಿತೆಯಿಂದ ಕೂಡಿದೆ. ತನ್ನ ಅನಿಸಿದ ಭಾವನೆಗಳನ್ನು ನೇರವಾಗಿ ಬಿಚ್ಚಿ ಮನಸ್ಸಿನಿಂದ ಹೇಳುವ ಕಲೆಗಾರಿಕೆ ಮಾನವನದಾಗಿದ್ದಾನೆ. ಮಾನವನ ಮಾತು ಸಂಸ್ಕೃತವಾಗಿದ್ದರೂ ಸಹ ಅವರ ಅರ್ಥ ಸಹಾಯತೆಯಿಂದ ಕೂಡಿರುತ್ತದೆ.

7) ಸಂವಹನಾ ಶೀಲತೆ :-

ಮಾನವನನ್ನು ಕೂಡ ತಿಳಿಸುವ ಶಕ್ತಿಯಿಂದ ಬದಲಾವಣೆಗೊಳ್ಳು-ತ್ತಿದೆ. ಇದರ ಮಾನವನ ವ್ಯಕ್ತಿ ತಿಳಿವಳಿಕೆಯೊಂದಿಗೆ ಸಹ ಅದು ತನ್ನ ಮಾತಿನ ಸಂಗತಿಗಳನ್ನು ಮಾತು ತನ್ನಲ್ಲಿಯೂ ಕಲ್ಪನೆಯೊಂದಿಗೆ ಬರುತ್ತದೆ. ಒಂದು ಮಾನವನ ಶಕ್ತಿಯು ಇಂದು ಭಾಷಾ ದೃಷ್ಟಿಯಿಂದ ಅಥವಾ ಪ್ರಾದೇಶಿಕ ದೃಷ್ಟಿಯಿಂದಲೂ ಬದಲಾವಣೆಯಾಗಿರಬಹುದು. ಇದರ ಅರ್ಥ ಮಾತು ಭಾಷೆ ಒಂದೇ ಪ್ರಕಾರವು.

8) ವಸ್ತು ಮೌಲ್ಯತೆ :-

ಯಾವುದೇ ಕಾಲದಲ್ಲಿ ಯಾವುದೇ ಮಾತಿನಲ್ಲಿ ಸ್ವಭಾವದ-ಲೂ ಕಾಲ, ದೇಶ ಪ್ರಭಾವಿತವಾಗಿ ನಿಲ್ಲುತ್ತದೆ. ಸೃಷ್ಟಿಕಾರನ ದೃಷ್ಟಿಯಿಂದ ಸೃಷ್ಟಿತವಾದ ವಿಧಾನ ಈ ವಸ್ತುಮೌಲ್ಯತೆಗೆ ಕಾರಣವಾಗಿದೆ.

ಮಾನವನ ಸಂಸ್ಕೃತಿ ಒಂದು ಭಾಗ :-

ಸಂಸ್ಕೃತಿಯು ಎಲ್ಲಾ ಮಾನವಶಾಸ್ತ್ರಗಳ ಮೂಲ ಪ್ರಕಾರ. ಮಾನವನ ಸಕಲ ಜನ ಸಂಸ್ಕೃತಿ ಒಂದು ಅಧ್ಯಯನವಾಗಿದೆ. ಇದು ಯಾವುದೇ ವರ್ಗ, ವರ್ಣ, ಜಾತಿಗೆ ಸೇರಿದವರು ಸಂಸ್ಕೃತಿ ಒಂದು ಭಾಗ, ವರ್ಗ, ಜಾತಿ ವರ್ಣಗಳಲ್ಲಿ ಜಾತ್ಯಾತೀತವಾಗಿಯಾದರೂ ಬೇರೆಯಾಗುವ ಜನ ಸಂಸ್ಕೃತಿಯಲ್ಲಿ ಒಟ್ಟಿಗೆ ಸೇರುತ್ತಾರೆ.

10) ಮಾನವನ ಸರ್ವ ಸಾಮಾನ್ಯ ಲಕ್ಷಣ:-

ಮಾನವನ ಎಲ್ಲಾ ವರ್ಗಗಳಲ್ಲೂ ಕಂಡು ಬಂದರೂ —ಅದು ಯಾವುದೇ ವರ್ಗಕ್ಕೆ, ಜಾತಿಗೆ, ಸೀಮಿತವಾದುದಲ್ಲ—ಅದು ಎಲ್ಲರ ಮಧ್ಯೆ ಸರ್ವ ಸಾಧಾರಣವಾಗಿ ಇರುವಂತಹದು. ಕೆಲವು ಸಾಂದರ್ಭಿಕ ವ್ಯತ್ಯಾಸಗಳನ್ನು ಬಿಟ್ಟರೆ ಮಾನವರೆಲ್ಲ ಒಟ್ಟಾಗಿ—ಅನುಸರಿಸುವ ಆಚರಣೆ-ಯ, ನಡುವಳಿಕೆ ಬಗೆಗಿನ ಆಚಾರಗಳು. ಇದು ಮಾನವನ ಒಳಗೊಂಡಿರುವ ಸರ್ವಸಾಮಾನ್ಯ—ಅಂಶಗಳು ಹಾಗೆ ಮಾನವನ ಸರ್ವಸಾಧಾರಣವಾಗಿ ಎಲ್ಲರ ಲಕ್ಷಣವಾಗಿದೆ.


11) ಎಲ್ಲರ ಸಾಮಾನ್ಯ ಒಪ್ಪಿಗೆಯಾಗಿದೆ:-


ಮಾನವರ ನಡೆ, ನುಡಿ, ಆಚರಣೆ, ನಂಬಿಕೆ ಮೊದಲಾದ—ಅಂಶಗಳು ಮಾನವರಲ್ಲಿ ಒಳಗೊಳ್ಳುತ್ತವೆ. ಇವುಗಳನ್ನು ಒಪ್ಪಿಕೊಂಡಿರುವರು ಮಾನವರು.

12) ಮಾನವನ ಜನನ (ಜನ್ಮದಿಂದ ಮರಣದವರೆಗಿನ ಪಯಣ):-

ಪ್ರತಿಯೊಂದು ಮಾನವನಿಗೆ ತನ್ನದೆ ಆದ ಜೀವನ ಹಾಗೂ ಪ್ರತಿಭೆಯನ್ನು ಹೊಂದಿರುತ್ತದೆ. ಪ್ರತಿಯೊಂದು ಮಾನವ-ನು ತನ್ನದೆ ಆದ ಧೋರಣೆಗಳನ್ನು ಚಿಂತನೆಗಳನ್ನು, ನಡುವಳಿಕೆಗಳ ಭಾಷೆ ಹೊಂದಿರುತ್ತದೆ. ಪ್ರತಿಯೊಂದು—ಅಂಶವು ಒಂದೊಂದು ಸೃಷ್ಟಿಯು ಪ್ರತಿ ಸೃಷ್ಟಿಯು ಮತ್ತೆ ಭಿನ್ನವಾಗಿದ್ದು ಒಂದರ ಸೃಷ್ಟಿ ಮತ್ತೊಂದರ ಸೃಷ್ಟಿಗೆ ಹೋಲುವುದಿಲ್ಲ. ಹಾಗೆ ಮಾನವನ ಸೃಷ್ಟಿ, ಪ್ರಕೃತಿ, ಬಂಡಾಯ, ಒಳ್ಳೆಯ ಇನ್ಯಾವುದೇ ಮಾನವನ ಸೃಷ್ಟಿ ನಾನು ದೃಷ್ಟಿಯಿಂದಲೇ ಪ್ರತಿ ಮಾನವನು ತನ್ನದೇ ಆದ ಜೀವನ ಮತ್ತು ಪ್ರತಿಭೆಯನ್ನು ಪಡೆದಿರುತ್ತದೆ.

# ಲೆಜಿಮ್ ನೃತ್ಯ





## — : ಕಂಸಾಳೆ : —

ಕಂಸಾಳೆ ಮಲೆ ಮಹಾದೇಶ್ವರನ ಭಕ್ತರಾದ ದೇವರಗುಡ್ಡರು ಬಳಸುವ ವಿಶಿಷ್ಟ ಬಗೆಯ ವಾದ್ಯ. ಮಾದೇಶ್ವರನ ಕಾವ್ಯವನ್ನು ಈ ಕಲಾವಿದರು ಹಾಡುವರು. ಇವರು ಮೈಸೂರು, ಮಂಡ್ಯ, ಬೆಂಗಳೂರು ಜಿಲ್ಲೆಗಳಲ್ಲಿ ನೆಲೆಸಿರುವರು. ಕಥಾ ರೂಪದಲ್ಲಿ ವಂಶಪಾರಂಪರ್ಯವಾಗಿ ಹೇಳುತ್ತಾ ಮುಂದುವರಿಸಿಕೊಂಡು ಬಂದಿರುವರು. ಇದರ ಹುಟ್ಟಿನ ಬಗ್ಗೆ ಹಲವು ಐತಿಹ್ಯಗಳಿವೆ. 'ಕಾಂಸ್ಯ (ಕಂಚು) ತಾಳವೇ ಕಂಸಾಳೆಯಾಗಿದೆ' ಎಂಬ ಅಭಿಪ್ರಾಯವಿದೆ. ಇದಕ್ಕೆ ಕೇಶಿರಾಜನ ಸಮರ್ಥನೆಯಂತೆ "ಪ್ರಾಕ ವಿಧಾಂತೆ, ವರ್ಣಲೋಪಂ ಉತ್ತರ ಪದಾದಿ ಅವಿಯಾಗಿ ಕಾಂಸ್ಯತಾಳಕ್ಕೆ ಕಂಸಾಳಂ ಎಂದಾಂತು" ಎಂಬ ವಿವರಣೆಯನ್ನು ನೀಡಿರುವನು.

ಜನಪದ ಕಾವ್ಯಗಳಲ್ಲಿ ಕಂಸಾಳೆಯ ಬಗ್ಗೆ ಕಂಡುಬರುವ ಉಲ್ಲೇಖಗಳೆಂದರೆ ಹರಿಹರನ "ಗಿರಿಜಾ ಕಲ್ಯಾಣ" ಮತ್ತು ಬಸವರಾಜ ಸಿಂಗಿರಾಜನ ಚೆನ್ನಬಸವ ಪುರಾಣಗಳಲ್ಲಿ 'ಕಂಸಾಳೆ' ಎಂಬ ಪದದ ಬಳಕೆಯಾಗಿರುವುದು.

ಡೊಳ್ಳು ಕುಣಿತ






## ಡೊಳ್ಳು ಕುಣಿತ

ಜಾನಪದ ಕಲೆಗಳಲ್ಲಿ ಒಂದಾ-
-ಗಿರುವ ಪ್ರದರ್ಶಿಸುವ ಡೊಳ್ಳು ಕುಣಿತ
ಪ್ರೇಕ್ಷಕರ ಮನಸೆಳೆಯುವ ಕಲೆ. ಇದಕ್ಕೆ
ಮೈಕಟ್ಟು ಮತ್ತು ಶಕ್ತಿ ಇರುವವ-
-ರು ಮಾತ್ರ ಈ ಕಲೆಯನ್ನು ಪ್ರದರ್ಶಿಸಬಲ್ಲರು. ಉತ್ತರ ಕರ್ನಾಟಕ-
-ದ ಬಯಲುಸೀಮೆ ಜಿಲ್ಲೆಗಳು ಹಾಗೂ ಚಿತ್ರದುರ್ಗ ಮತ್ತು ಶಿವಮೊಗ್ಗ
ಜಿಲ್ಲೆಗಳಲ್ಲಿ ಪ್ರಚಲಿತವಿರುವ ಡೊಳ್ಳು ಕುಣಿತವು ಅತ್ಯ-
ಆಕರ್ಷಕವಾದ ನೃತ್ಯ ಶೈಲಿಗಳಿಂದ ಒಳಗೊಂಡಿದೆ.
ಡೊಳ್ಳು ಕುಣಿತ - ಒಂದು ಜಾನಪದ ಹಾಗೂ ಶಾಸ್ತ್ರೀಯವಾದ ಕಲೆ,
ನೃತ್ಯ. ಡೊಳ್ಳು ಬಾರಿಸುತ್ತಾ ಕುಣಿಯುವುದರಿಂದ ಇದಕ್ಕೆ
ಡೊಳ್ಳು ಕುಣಿತ ಎಂಬ ಹೆಸರು.

ವಿಶೇಷತೆ: ಕುರುಬ ಜನಾಂಗದ ವಾದ್ಯವಾ-
-ಗಿರುವ ಡೊಳ್ಳು ಜೊತೆಗೆ ಸಂಪ್ರದಾಯ ಹಿನ್ನೆಲೆಯಿಂದ
ನಿಯಮಿಸಲಾಗಿ ಬರುತ್ತಿದೆ. ಡೊಳ್ಳಿನ ಸುತ್ತಲೂ ಬಣ್ಣ
ಬಣ್ಣದ ಬಟ್ಟೆಗಳು ಕಟ್ಟಿರುವುದರಿಂದ ಅವರ ಆಕರ್ಷಕ
ಬಣ್ಣಗಳು ಪ್ರದರ್ಶಿಸುತ್ತವೆ. ಡೊಳ್ಳಿನ ಸುತ್ತಲೂ ಬಣ್ಣ
ಕಾಣುತ್ತದೆ ಒಂದು ವಿಶಿಷ್ಟ ಕಲೆಯಾಗಿದೆ.

ವೀರಗಾಸೆ



## : ವೀರಗಾಸೆ :



ವೀರಗಾಸೆ ಸಾಮೂಹಿಕ ನೃತ್ಯವೆನ್ನಿಸಿಕೊಂಡ ಕರ್ನಾಟಕದ ಒಂದು ಜಾನಪದ ಕಲೆ. ಶೈವ ಸಂಪ್ರದಾಯದ ಧಾರ್ಮಿಕ ವೀರನೃತ್ಯ. ನೃತ್ಯದ ನಡುವೆ ಕೆಲವು ಪುರವಂತ ಜನ [illegible] ಒಡಪು ಹೇಳುವ [illegible] ನಡೆಸಿಕೊಡುತ್ತ, ಕತ್ತಿ [illegible] ಮುಂದೆ ಇದರಲ್ಲಿ ಭಾಗವಹಿಸುವರು. ತುಮಕೂರು, ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ, ಧಾರವಾಡ ಜಿಲ್ಲೆಗಳಲ್ಲಿ ಈ ನೃತ್ಯ ಪ್ರಚಲಿತವಿದೆ. ತಾಳ, ಶ್ರುತಿ, ಚಮಾಳ (ಸಮ್ಮೇಳ ಸಂಬಾಳ), ಓಲಗ ಅಥವಾ ಮುಖವೀಣೆ, ಕರಡಿ-ವಾದ್ಯ - ಈ ಸಂಗೀತವಾದ್ಯಗಳು ಇಲ್ಲಿ ಬಳಕೆಯಾಗುತ್ತವೆ. ಕರಡೆ ಈ ಕುಣಿತದಲ್ಲಿ ಅಸಾಧಾರಣ ವಾದ್ಯ ಎನಿಸಿದೆ.

# ಕರಗ :-





## —: ಕರಗ :—

ಕರಗ ಕರ್ನಾಟಕದ ಪ್ರಸಿದ್ಧ ಜಾನಪದ ಉತ್ಸವಗಳಲ್ಲಿ ಒಂದಾಗಿದೆ. ಈ ಸಂದರ್ಭದಲ್ಲಿ ಪುರುಷರು (ಸಾಂಪ್ರದಾಯಿಕವಾಗಿ, ವಹ್ನಿಕುಲ ಕ್ಷತ್ರಿಯರು (ತಿಗಳರು) ಜನಾಂಗದವರು ಶಕ್ತಿದೇವತೆಯಾಗಿ ಆರಾಧಿಸುತ್ತಾರೆ.

ಶತಮಾನಗಳ ಇತಿಹಾಸ ಹೊಂದಿರುವ ವಿಶ್ವ-ಪ್ರಸಿದ್ಧ ಬೆಂಗಳೂರು ಕರಗಕ್ಕೆ ತನ್ನದೇ ಆದ ವೈಶಿಷ್ಟ್ಯವಿದೆ. ಪುರುಷರಿಂದಲೇ ಶಕ್ತಿಯನ್ನು ಆರಾಧಿಸುವ ಹಬ್ಬಗಳ ಸಂಪ್ರದಾಯಗಳಲ್ಲಿ ಕರಗ ಮಹೋತ್ಸವವೂ ಒಂದು. ಕರಗ (ಕರಕ) ಎಂಬ ಪದಕ್ಕೆ 'ಕುಂಭ' ಎಂಬ ಅರ್ಥ ಇದೆ. ಕ- ಕೈಯಿಂದ ಮಾಡದ, ರ- ರುಂಡದ ಮೇಲೆ ಧರಿಸಿ, ಗ- ಗಮಿಸುವುದು (ನಡೆಯುವುದು) ಎಂಬ ಅರ್ಥ ವಿವರಣೆ ಬಳಕೆಯಲ್ಲಿದೆ. ಕರಗ ಹಬ್ಬ ಮೂಲತಃ ಪಲ್ಲವರಿಗೂ ತಮಿಳುನಾಡಿನಲ್ಲಿ ಬಹಳ ಹಿಂದಿನಿಂದಲೂ ವೈಭವದಿಂದ ಆಚರಿಸಲ್ಪಡುತ್ತಿದೆ. ಕರ್ನಾಟಕ ರಾಜ್ಯದ ಬೆಂಗಳೂರು, ಕೋಲಾರ ಜಿಲ್ಲೆಯ ಹಲವು ಭಾಗಗಳಲ್ಲಿ ಈ ಆಚರಣೆ ರೂಢಿಯಲ್ಲಿದೆ. ಬೆಂಗಳೂರಿನ ಕರಗ ಪ್ರಸಿದ್ಧವಾಗಿದೆ.

ಯಕ್ಷಗಾನ



# ಯಕ್ಷಗಾನ :-




ನೃತ್ಯ, ಹಾಡುಗಾರಿಕೆ, ಮಾತುಗಾರಿಕೆ, ವೇಷಭೂಷಣಗಳನ್ನೊಳಗೊಂಡ ಒಂದು ಸ್ವತಂತ್ರವಾದ ಶಾಸ್ತ್ರೀಯ ಕಲೆ. ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿ (ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ), ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಕೇರಳದ ಕಾಸರಗೋಡು ಜಿಲ್ಲೆಗಳಲ್ಲಿ ಯಕ್ಷಗಾನವು ಜನ ಪ್ರಿಯವಾಗಿದೆ.

ಯಕ್ಷಗಾನದ ಪ್ರಾಚೀನತೆಯ ಬಗ್ಗೆ ಹೇಳುವ ಮಾಹಿತಿ ಸ್ಪಷ್ಟವಾಗಿಲ್ಲವಾದರೂ ಭರತಮುನಿಯ ನಾಟ್ಯಶಾಸ್ತ್ರದಲ್ಲಿ ಅಲ್ಲಲ್ಲಿ ಕಂಡು ಬರುವ ಕೆಲವು ಆಧಾರಗಳಿಂದ ಈ ಕಲೆ ಬಹಳ ಹಿಂದಿನಿಂದಲೂ ಇತ್ತೆಂಬುದು ಸ್ಪಷ್ಟವಾಗುತ್ತದೆ. ಕನ್ನಡದ ಪ್ರಾಚೀನ ಕಾವ್ಯಗಳಲ್ಲಿ ಯಕ್ಷಗಾನ ಎಂಬ ಹೆಸರಿನಲ್ಲಿ ಉಲ್ಲೇಖ ಕಂಡುಬರುತ್ತದೆ. ಕರ್ನಾಟಕದಲ್ಲಿ ಸುಮಾರು ೧೨ ನೇಯ ಶತಮಾನದಲ್ಲಿ ಒಂದು ಗಾನ ಸಂಪ್ರದಾಯ ಯಕ್ಷಗಾನ ಎಂಬ ಹೆಸರಿನಿಂದ ಬಳಕೆಯಲ್ಲಿತ್ತು. ಮುಂದೆ ಅದು ನಾಟಕ ರೂಪದಲ್ಲಿ ಬೆಳವಣಿಗೆಯಾಗಿ ಬಯಲಾಟ, ದಶಾವತಾರ ಆಟ, ದೊಡ್ಡಾಟ, [illegible] ಎಂಬ ಹೆಸರುಗಳಿಂದ ೧೬ ನೇಯ ಶತಮಾನದ ಹೊತ್ತಿಗೆ ರೂಢಿಗೆ ಬಂದಂತೆ ಕಾಣುತ್ತದೆ.

ಕೀಚಕ ಸೈರಂಧ್ರಿ



## -: ಕಥಕ್ಕಳಿ :-




ಕಥಕ್ಕಳಿ ಅತ್ಯಂತ ಶೈಲೀಕೃತ ಶಾಸ್ತ್ರೀಯ ಭಾರತೀಯ ನೃತ್ಯ-ನಾಟಕವಾಗಿದೆ. ಪಾತ್ರಧಾರಿಗಳ ಆಕರ್ಷಕ ಅಲಂಕಾರ, ವೈಭವವಾದ ವೇಷಭೂಷಣ, ವಿವರವಾದ ಭಾವಭಂಗಿಗಳು ಮತ್ತು ಅತಿ ಸೂಕ್ಷ್ಮವಾದ ಅಂಗಿಕ ಚಲನೆಗಳು ಉನ್ನತ ಸಂಗೀತ ಮತ್ತು ಪೂರಕವಾದ ತಾಳವಾದ್ಯದೊಂದಿಗೆ ಹದವಾಗಿ ಬೆರೆಯುವಂತೆ ಪ್ರಸ್ತುತಪಡಿಸಲಾಗುತ್ತದೆ. ಭಾರತದ ಇಂದಿನ ಕೇರಳ ರಾಜ್ಯದಲ್ಲಿ ಸುಮಾರು 17 ನೇ ಶತಮಾನದಲ್ಲಿ ಇದು ಹುಟ್ಟಿತು. ಕಲಾತ್ಮಕ ಸಿದ್ಧಾಂತ ನೃತ್ಯಗಳು, ವಿಸ್ತೃತ ಭಾವಭಂಗಿಗಳು ಮತ್ತು ಹೆಚ್ಚು ವಿಶ್ರಾಂತವನ್ನೊಳಗೊಂಡು, ಅಲಂಕೃತ ಮುಖವರ್ಣಿಕೆ ಹಾಗೂ ನಿಖರವಾದ ತಾಳಬದ್ಧತೆಯನ್ನು ಸೇರಿಸಿಕೊಂಡು, ಮತ್ತಷ್ಟು ವಿಕಸನಗೊಂಡಿದೆ.

ಲಾವಣಿ ನೃತ್ಯ



## ಲಾವಣಿ ನೃತ್ಯ :-




ಲಾವಣಿ ಅತ್ಯಂತ ಜನಪ್ರಿಯ ಹಾಗೂ ಜಾನಪದ ಸಂಗೀತ ಮತ್ತು ನೃತ್ಯ ಪ್ರಕಾರಗಳಲ್ಲಿ ಒಂದಾಗಿದೆ. ಮಹಾರಾಷ್ಟ್ರ, ದಕ್ಷಿಣ ಮಧ್ಯ ಪ್ರದೇಶ, ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಜನಪ್ರಿಯವಾಗಿದೆ. ಉತ್ಸಾಹ, ಶಕ್ತಿಯುತ, ಸಾಂಕೇತಿಕವಾದ ಸಂಗೀತದೊಂದಿಗೆ ಈ ಲಾವಣಿ. ಲಾವಣಿ ನೃತ್ಯವು ಮರಾಠಿ ಜಾನಪದ ರಂಗಭೂಮಿಯಿಂದ ಅಭಿವೃದ್ಧಿಗೆ ಗಣನೀಯವಾಗಿದೆ. ಕೊಡುಗೆ. ಮಹಾರಾಷ್ಟ್ರ ಮತ್ತು ದಕ್ಷಿಣ ಮಧ್ಯ ಪ್ರದೇಶಗಳಲ್ಲಿ ಬಹಳ ಜನಪ್ರಿಯವಾಗಿದೆ.

ಲಾವಣಿ ಮಹಾರಾಷ್ಟ್ರದ ಜನಪ್ರಿಯ ಜಾನಪದದಲ್ಲಿ ಆಧುನಿಕ ಹೆಸರು. ಸಾಂಪ್ರದಾಯಿಕವಾಗಿ, ಹಾಡುಗಳನ್ನು ಸ್ತ್ರೀ ಕಲಾವಿದರು ಹಾಡಿದರೆ, ಪುರುಷ ಕಲಾವಿದರು ಕೆಲವೊಮ್ಮೆ ಲಾವಣಿ ಹಾಡುತ್ತಾರೆ. ಲಾವಣಿ ಸಂಬಂಧಿತ ನೃತ್ಯ ರೂಪವನ್ನು "ತಮಾಶಾ" ಎಂದು ಕರೆಯಲಾಗುತ್ತದೆ. ಲಾವಣಿಯನ್ನು ಒಬ್ಬ ಹೆಣ್ಣು ಇನ್ನು ಪ್ರೇಕ್ಷಕರ ಒಂದು ಪ್ರಣಯ ಕಲೆ ಎಂದು ಕಲ್ಪಿಸಲಾಗಿದೆ.

ಭಾಂಗ್ರಾ ನೃತ್ಯ





Bhangra Dance - Mad...


## —: ಭಾಂಗ್ರಾ ನೃತ್ಯ :—

ವಿಶಿಷ್ಟವಾದ ಪ್ರದರ್ಶನದಲ್ಲಿ, ಉಲ್ಲಾಸದ ನರ್ತಕರು ಜೋರಾದ ಡೋಲಿನ ಬಡಿತಗಳು ಮತ್ತು ಬೋಲಿಗಳನ್ನು ಸಾಮಾನ್ಯವಾಗಿ ಮೊಳಗುತ್ತವೆ. ಹಾಗೂ ಅಥವಾ ಭಾಷಾದ ಪಠಣಗಳೊಂದಿಗೆ - ಬೋಲಿಯಾನ್ ಎಂದರೆ ಸಣ್ಣ ಹಾಡುಗಳ ಪದ್ಯ ಎಂದು ಕರೆಯುತ್ತಾರೆ ಹಾಗೂ ಅತ್ಯಂತ ಗಮನಾರ್ಹವಾಗಿದ್ದು ಡೋಲು. ಒಂದು ತುದಿಯಲ್ಲಿ ಭಾರವಾದ ಬೀಟರ್‌ನಿಂದ ಮತ್ತು ಇನ್ನೊಂದು ತುದಿಯಲ್ಲಿ ಹಗುರವಾದ ಕೋಲಿನಿಂದ ಹೊಡೆಯುತ್ತಾರೆ. ಇದು ಭಾಂಗ್ರಾ ಸಂಗೀತದ ಮುಖ್ಯ ಲಕ್ಷಣವಾಗಿದೆ. ಒಂದು ಶಕ್ತಿಯುತ ಪಂಜಾಬಿ ನೃತ್ಯವು ಭಾಂಗ್ರಾ ಪಂಜಾಬ್ ಪ್ರದೇಶದಿಂದ ಹುಟ್ಟಿಕೊಂಡಿದೆ. ಅದರ ಪ್ರಭಾವ - ದಿನದ ಆಧುನಿಕ ಭಾಂಗ್ರಾ ತನ್ನ ಸಾಂಪ್ರದಾ-ಯಿಕ ಪಂಜಾಬಿ ಬೇರುಗಳನ್ನು ಉಳಿಸಿಕೊಂಡು ಅವತಾರ ಮಾಡಿಕೊಂಡಿದೆ, ಆದರೆ ಸಮಕಾಲೀನ ಸಂಗೀತ ಶೈಲಿ - ಪ್ರಕಾರಗಳ ಸ್ಪರ್ಧೆಗಳು ಮತ್ತು ಶಾಲೆಗಳು ಮತ್ತು ಸ್ಟುಡಿಯೋಗಳಲ್ಲಿ ವ್ಯಾಪಕ-ಮತ್ತು ನೃತ್ಯ ಕಾರ್ಯಕ್ರಮಗಳ ಪ್ರದರ್ಶನವನ್ನು ನೀಡಲು ಅದರ ವ್ಯಾಪ್ತಿಯನ್ನು ವಿಸ್ತರಿಸುತ್ತದೆ.

# ಘೂಮರ್ ನೃತ್ಯ



## ಘೂಮರ್ :-



ಘೂಮರ್ ರಾಜಸ್ಥಾನದ ಸಾಂಪ್ರದಾಯಿಕ ಜಾನಪದ ನೃತ್ಯವಾಗಿದೆ. ಭಿಲ್ ಬುಡಕಟ್ಟಿನ ಜನರು ಈ ನೃತ್ಯವನ್ನು ಪ್ರದರ್ಶಿಸುತ್ತಾರೆ, ನಂತರ ರಾಜಸ್ಥಾನದ ಇತರ ಸಮುದಾಯಗಳು ಇದನ್ನು ಅಳವಡಿಸಿಕೊಂಡಿವೆ. ಈ ನೃತ್ಯವನ್ನು ಮುಖ್ಯವಾಗಿ ಘಾಗ್ರಾ ಚೋಲಿ ಧರಿಸಿಕೊಂಡು ಮಾಡುತ್ತಾರೆ. ಘೂಮ್ ಎಂಬ ಪದವು ನೃತ್ಯಗಾರರ ಮೇಲ್ಮುಖ ಸುತ್ತುವುದನ್ನು ಬಿಂಬಿಸುತ್ತದೆ ಮತ್ತು ಇದು ಘೂಮರ್ ಪದದ ಆಧಾರವಾಗಿದೆ. ೧೯೮೬ ರಲ್ಲಿ ಘೂಮರ್ ಜಾನಪದ ನೃತ್ಯವನ್ನು ಸಂರಕ್ಷಿಸಲು ಮತ್ತು ಉತ್ತೇಜಿಸಲು ಮಹಾರಾಣಿ ರಾಜ್ಮಾತಾ ಗೋವರ್ಧನ್ ಕುಮಾರಿ ಎಂಬುವರು 'ರಂಗರ್ ಘೂಮರ್ ನೃತ್ಯ ಅಕಾಡೆಮಿ' ಯನ್ನು ಸ್ಥಾಪಿಸಿದರು. ೨೦೦೭ ರಲ್ಲಿ ಭಾರತ ಸರ್ಕಾರವು ಕಲೆಗಳಿಗೆ ನೀಡಿದ ಕೊಡುಗೆಗಾಗಿ ಅವರಿಗೆ ಪದ್ಮಶ್ರೀ ಗೌರವವನ್ನು ನೀಡಿದೆ.

ಶ್ರೀಮಂತ ಮಾದರಿಯ ಚಾರ್ಲ್ಸ್ ಇ. ಗೋವರ್ ಜಾನಪದ-ಸಂಪ್ರದಾಯಗಳನ್ನು ತನ್ನ ಗ್ರಂಥದಲ್ಲಿ ಗುರುತಿಸಿದ್ದಾನೆ. ಯೂರೋಪ್ ಸ್ಟೈಲು ಎಂದು ಜನಪ್ರಿಯನಾಗಿದ್ದ ಆತ ಜನಜೀವನದೊಡನೆ ಅತ್ಯಂತ ಹತ್ತಿರದ ಸಂಬಂಧವನ್ನು ಇಟ್ಟುಕೊಂಡು ಸ್ವಾರಸ್ಯವಾದ ರೀತಿಯಲ್ಲಿ ಅನೇಕ ವಿಷಯ-ಗಳನ್ನು ಬರೆಯಿಸಿದ್ದಾನೆ.

ಕನ್ನಡ ಜಾನಪದ ಸಂಗ್ರಹದ ಇತಿಹಾಸದಲ್ಲಿ ಚಾರ್ಲ್ಸ್ ಇ. ಗೋವರ್‌ನ ಹೆಸರು ಅತ್ಯಂತ ಗಮನಾರ್ಹವಾದುದು. ಕಳೆದ ಶತಮಾನದ ಮಧ್ಯಭಾಗದಲ್ಲಿ ಪ್ರಕಟವಾದ "ಫೋಕ್ ಸಾಂಗ್ಸ್ ಆಫ್ ಸದರನ್ ಇಂಡಿಯಾ" ಎಂಬ ತನ್ನ ಗ್ರಂಥದಲ್ಲಿ ಆತ ಭಾರತದ ಪ್ರಮುಖ ಭಾಷೆಗಳ ಜನಪದಗೀತೆಗಳನ್ನು ಇಂಗ್ಲಿಷ್ ಅನುವಾದಿಸಿ ಪ್ರಕಟಿಸಿದ್ದಾನೆ. ಆತನ ಕೃತಿಯಲ್ಲಿ ಕನ್ನಡ ಜನಪದ ಗೀತೆಗಳೇ ಪ್ರತ್ಯೇಕ ಒಟ್ಟು 28 ಹಾಡುಗಳನ್ನು ಪ್ರಕಟ ಮಾಡಿದ್ದಾರೆ. ಇವುಗಳಲ್ಲಿ ಬಹುಪಾಲು ದಾಸರ ಕೀರ್ತನೆಗಳೇ. ದಾಸಪರಂಪರೆಯ ಹಾಡುಗಾರರಿಂದ ಇವನ್ನು ಸಂಗ್ರಹಿಸಿದ ಇಬ್ಬರು ಮಿತ್ರರುಗಳು (ಬಿ.ಎಚ್. ಬೈಲ್ ಹಾಗೂ ಎಸ್. ಡಾಬ್ಲರ್) ದಾಸರ ಪದಗಳು ಎಂಬ ಶೀರ್ಷಿಕೆಯಲ್ಲಿ ಅವನ್ನು ಗೋವರನಿಗೆ ನೀಡಿದ್ದಾರೆ. ಅವನು ಅನುವಾದಿಸಿ ಆದ ಕೊಟ್ಟ ಆ ಕೀರ್ತನೆಗಳನ್ನು ಗೋವರ್ ಕನ್ನಡ ಹಾಡುಗಳು ಎಂದೇ ಕರೆದು ಅವುಗಳ ಬಗ್ಗೆ ವ್ಯಾಖ್ಯೆ ಮಾಡಿದ್ದಾನೆ. ಇದರ ಶುದ್ಧ ಜನಪದ ಗೀತೆಗಳಾವುವೂ ಗೋವರ್‌ನ ಗಮನಕ್ಕೆ ಬಂದಂತೆ ತೋರುವುದಿಲ್ಲ. ಗೋವರನಿಗೂ ಮೊದಲೇ 24 ಹಾಡುಗಳನ್ನು ಪ್ರಕಟಿಸಿದ್ದ ಮೊಗ್ಲಿಂಗ್ ಕೃತಿಯನ್ನು ಆ ದೃಷ್ಟಿಯಿಂದಲೇ ಪರಿಶೀಲಿಸಬೇಕಾಗಿದೆ.

ಜನಪದ ನೃತ್ಯ ಪ್ರದರ್ಶನವನು ಅನುಕೂಲಗಳನ್ನು ಅಭಿವ್ಯಕ್ತಪಡಿಸುವ ಮಾರ್ಗ, ಮತ್ತು ಶಕ್ತಿಶಾಲಿ ಮಾಧ್ಯಮ ಪ್ರಕಾರವೆಂದು ಅಭಿಪ್ರಾಯಿಸಲಾಗಿದೆ. ಅವನು ತನಗೂ ತನ್ನ ದೇವರಿಗೂ ಇರುವ ಸಂಬಂಧವನ್ನು ವ್ಯಕ್ತಪಡಿಸುವುದಕ್ಕಾಗಿ, ಜೀವನದಲ್ಲಿ ಬರುವ ಕಷ್ಟಗಳನ್ನು ನಿವಾರಿಸಿಕೊಳ್ಳುವುದಕ್ಕಾಗಿ, ಋತುಮಾನಗಳಲ್ಲಾಗುವ ಬದಲಾವಣೆಗಳನ್ನು ಗಮನಿಸುವುದಕ್ಕಾಗಿ, ಸೂರ್ಯನ ಉದಯ ಮತ್ತು ಅಸ್ತಮಗಳನ್ನು ಸ್ವಾಗತಿಸುವುದಕ್ಕಾಗಿ, ಚಂದ್ರನ ಪ್ರಕಾರದಲ್ಲಾಗುವ ವ್ಯತ್ಯಾಸಗಳನ್ನು ಗುರುತಿಸುವುದಕ್ಕಾಗಿ, ಜೀವನದಲ್ಲಿ ಬೇರೆ ಬೇರೆ ಹಂತಗಳನ್ನು ಅನುಸರಿಸುವುದರ ಪ್ರತೀಕವಾಗಿ, ಪ್ರಕೃತಿ, ಪ್ರಾಣಿಪಕ್ಷಿ ಇವುಗಳ ಚಲನವಲನಗಳನ್ನು ಅನುಕರಿಸಲಾರಂಭಿಸಿದ.

ಮನುಷ್ಯನ ಜೀವನವನ್ನು ಚಲಿಸು ಸೂಚನೆಗಳಾಗಿರುವ ಹುಟ್ಟು, ಸಾವು ಮತ್ತು ಇವುಗಳ ನಡುವೆ ಅವನಿಗೆ ಉಂಟಾಗುವ ನಾನಾ ತರಹದ ಅನುಭವಗಳಿಗೆ ಇಂದು ಜನಾಂಗ ಚಲನೆಯಿಂದ ಮಾನವ ವ್ಯಕ್ತಪಡಿಸುವ ಇಂದು ಪ್ರತ್ಯಕ್ಷವಾಗಿ ಹುಟ್ಟಿಕೊಂಡಿರಬಹುದು. ಮೂಲಭೂತವಾಗಿ ಅದು ಅವನ ಅಂತರಂಗದ ಆನಂದದ, ತೃಪ್ತಿಯ ಸಹಜ ಅಭಿವ್ಯಕ್ತಿ. ಜನಾಂಗದ ಪ್ರವೃತ್ತಿ, ಸಂಪ್ರದಾಯ, ನಂಬಿಕೆ, ಮೂಢನಂಬಿಕೆ, ವೃತ್ತಿ ಮುಂತಾದವನ್ನು ಅದು ಪ್ರತಿಬಿಂಬಿಸುತ್ತದೆ.

ಆದ್ದರಿಂದ ಈ ಜಾನಪದ ನೃತ್ಯಗಳನ್ನು ದಾಖಲಿಸಿದರೆ ನಾವು ಕಾಪಾಡಿಕೊಳ್ಳಬಹುದು.

Head
Dept. of Kannada
G.P.P. Arts, Commerce & V.V.S. Science
College, SINDAGI-586128.

Co-ordinator IQAC
G. P. Porwal Arts, Comm & V. V. Salimath
Science College, SINDGI-586128. Dt.Vijayapur

Principal.
G. P Porwal Arts, Comm &
V. V. Salimath Sc. College
SINDGI-586128. College Code: 5234